

ತಾತ: ಅಲ್ವೋ ಗುಂಡಾ ಪರಿಕ್ಷೇಯಲ್ಲಿ ಎಲ್ಲ ಪ್ರಶ್ನೆಗಳನ್ನು ಬರೆದಿದ್ದೇನೆ ಎಂದು ಹೇಳಿದ್ದೆಯಲ್ಲ ಮತ್ಯಾಕೆ ಫೇಲ್ ಆದೆ?

ಗುಂಡ: ಬರಿ ಪ್ರಶ್ನೆಗಳನ್ನು ಬರೆದರೆ ಸಾಲಲ್ವಂತೆ ಅದಕ್ಕೆ ಉತ್ತರಾನೂ ಬರಿಬೇಕಂತೆ ತಾತಾ.

***

ನೀನು ಸ್ಕೂಲಿಗೆ ಯಾಕೇ ಹೋಗುವುದಿಲ್ಲ ?

ಬಹಳ ಸಲ ಹೋಗ್ತಿನಿ ಅಂಕಲ್, ಆದ್ರೆ ಓಡಿಸುತ್ತಾರೆ.

ಅದೇ ಯಾಕೆ

ಗರ್ಲ್ಸ್ ಸ್ಕೂಲ್‌ನಲ್ಲಿ ನಿನಗೇನು ಕೆಲಸ ಅಂತ.

***

ಕಲ್ಲೇಶಿ: ಹುಡುಗಿಯರು ಯಾಕೇ ಮೊದಲು ಲವ್ ಪ್ರಪೋಸ್ ಮಾಡಲ್ಲ?

ಮಲ್ಲೇಶಿ: ತ್ರೇತಾ ಯುಗದಲ್ಲಿ ಶೂರ್ಪನಖಿ ಪ್ರಪೋಸ್ ಮಾಡಲು ಹೋಗಿ ಮೂಗು ಕತ್ತರಿಸಿಕೊಂಡಳು. ಆ ಭಯ ಹುಡುಗಿಯರಿಗೆ ಇನ್ನು ಇರಬಹುದು ಅದಕ್ಕೆ.

***

ಈಗ ಏನು ಮಾಡ್ತಾ ಇದ್ದಿಯಾ?

ಎಂ.ಬಿ.ಎ ಸಾರ್.

ವಾವ್! ‘ಮಾಸ್ಟರ್ ಆಫ್ ಬಿಜಿನೆಸ್ ಅಡ್ಮಿನಿಸ್ಟ್ರೇಶನ್’ ಮಾಡ್ತಿದ್ದಿಯಾ.

ಅಲ್ಲ, ‘ಮಂಗಳೂರು ಬೊಂಡಾ ಅಂಗಡಿ’ ಇಟ್ಟಿದ್ದೆನೆ.

***

ಡಾಕ್ಟರ್: ಫೋನಿನಲ್ಲಿ ನಿನ್ನೆ ನಿಮ್ಮ ಅಪಾಯಿಂಟ್‌ಮೆಂಟ್ ಇತ್ತು ಯಾಕೇ ಬರಲಿಲ್ಲ?

ಗುಂಡ: ಬರಬೇಕು ಅಂತ ಮಾಡಿದ್ದೆ ಆದರೆ ಮೈಯಲ್ಲಿ ಸ್ವಲ್ಪ ಆರಾಮಿರಲಿಲ್ಲ ಅದಕ್ಕೆ.

***

ಸುಬ್ಬಾ: ನಮ್ಮಪ್ಪನ ಮುಂದೆ ಎಂಥ ಶ್ರೀಮಂತರು ಕೂಡ ಪ್ಲೇಟ್ ಹಿಡಿದು ನಿಂತಿರ್ತಾರೆ ಗೊತ್ತಾ.

ಸುಬ್ಬಿ: ಹೌದಾ ನಿಮ್ಮಪ್ಪ ಅಷ್ಟು ದೊಡ್ಡ ವ್ಯಕ್ತಿಯಾ? ಅವರು ಏನು ಕೆಲಸ ಮಾಡ್ತಾರೆ?

ಸುಬ್ಬಾ: ನಮ್ಮಪ್ಪಂದು ಪಾನಿ ಪೂರಿ ಅಂಗಡಿ ಇದೆ.

***

ಗಂಡ: ಲೇ ಇವತ್ತು ಹೊರಗಡೆ ಊಟ ಮಾಡೋಣ.

ಹೆಂಡತಿ: (ಖುಷಿಯಿಂದ) ಹೌದಾ ರ್‍ರೀ ಆಯ್ತು ಎರಡು ನಿಮಿಷದಲ್ಲಿ ರೆಡಿ ಆಗಿ ಬರ್ತಿನಿ.

ಗಂಡ: ಆಯ್ತು ಬೇಗ ಬಾ ನಾನು ಹೊರಗಡೆ ಚಾಪೆ ಹಾಕ್ತಿನಿ.

***

ಹೆಂಡತಿ: ರ್‍ರೀ ಮಗಳು ಬೆಳೆದು ನಿಂತಿದ್ದಾಳೆ ಬೇಗ ವರ ನೋಡಿ ಮದುವೆ ಮಾಡಬಾರದೇ

ಗಂಡ: ನನಗೂ ಆ ಜವಾಬ್ದಾರಿ ಇದೇ ಕಣೇ, ಆದರೆ ಯೋಗ್ಯ ವರ ಸಿಗಬೇಕಲ್ವಾ?

ಹೆಂಡತಿ: ಅಯ್ಯೋ! ನಮ್ಮ ಅಪ್ಪಾನೂ ಯೋಗ್ಯ ವರನೇ ಸಿಗಲಿ ಅಂತ ಕಾಯ್ಕೊಂಡು ಕುತ್ಕೊಂಡಿದ್ರೆ ನನ್ನ ಮದುವೆ ಆಗ್ತಾ ಇತ್ತೆನ್ರೀ?

***

ಹೆಂಡತಿ: ರ್‍ರೀ ಬೆಳಗ್ಗೆ ಬೆಳಗ್ಗೆ ಮನೆಯಿಂದ ಹೊರಗಡೆ ಹೋಗೊ ಸಮಯದಲ್ಲಿ ದೇವರಿಗೆ ಕೈ ಜೋಡಿಸಿ ನಮಸ್ಕಾರ ಮಾಡಿ ಹೋದ್ರೆ ಎಲ್ಲ ಕೆಲಸ ಒಳ್ಳೆಯದಾಗುತ್ತೆ.

ಗಂಡ: ನಾ ನಂಬುವುದಿಲ್ಲ ನನ್ನ ಮದುವೆ ದಿನ ನಾನು ಮನೆಯಿಂದ ಬರೋವಾಗ ದೇವರಿಗೆ ಕೈ ಜೋಡಿಸಿ ನಮಸ್ಕಾರ ಮಾಡಿ ಬಂದಿದ್ದೆ.

***




ಮನೆಯವರು ಶಾಪಿಂಗ್ ಹೋಗೀದಾರಂತೆ ಇನ್ನೊಂದು ನಾಲ್ಕು ಸರ ತರಬಹುದು... ತೊಗೊಂಡೇ ಹೋಗೋಣಾ ಸಾರ್....!!

ಯಮರಾಜ: ನೀನು ಸ್ವರ್ಗಕ್ಕೆ ಹೋಗುತ್ತೀಯಾ, ಇಲ್ಲ ನರಕಕ್ಕೆ...

ಹುಡುಗಿ: ನನ್ನ ಮೊಬೈಲ್ ಹಾಗೂ ಚಾರ್ಜರ್ ತಂದು ಕೊಟ್ಟರೆ ಸಾಕು ನಾನು ಎಲ್ಲಿ ಬೇಕಾದರೂ ಇರುತ್ತಿನಿ.

***

ಗುಂಡ ಎಕ್ಸ್ ರೇ ಮಾಡಿಸಿಕೊಂಡು ಬಂದ

ನಿಮ್ಮ ಎಕ್ಸ್ ರೇಯಲ್ಲಿ ಎಲುಬು ಮುರಿದಿದೆ ಎಂದು ಡಾಕ್ಟರ್ ಹೇಳಿದರು.

ಗುಂಡ: ಒಳ್ಳೆಯದೇ ಆಯಿತು ಎಕ್ಸ್ ರೇನಲ್ಲಿ ತಾನೆ ಮುರಿದಿರೋದು. ನಿಜವಾಗಿಯೂ ಮುರಿದಿದ್ದರೆ ತುಂಬಾ ಖರ್ಚಾಗುತ್ತಿತ್ತು.

***

ರಂಗ: ನಿನಗೆ ಹೇಗೆ ಗೊತ್ತಾಯಿತು ಅವನು ನಕಲಿ ಡಾಕ್ಟರ್ ಅಂತಾ?

ಗುಂಡ: ಅವನ ಹ್ಯಾಂಡ್ ರೈಟಿಂಗ್ ತುಂಬಾ ಚೆನ್ನಾಗಿದೆ.

***

ವಿದ್ಯಾರ್ಥಿ: ನಿಮ್ಮ ಪುಸ್ತಕ ನನಗೆ ದಾರಿ ದೀಪವಾಯಿತು ಸರ್.

ಮೇಷ್ಟ್ರು: ವೆರಿ ಗುಡ್ ಹೆಂಗೆ ಆಯಿತು ಅಂತಾ ಹೇಳು ಈ ಪೆದ್ದರು ಸ್ವಲ್ಪ ತಿಳಿದುಕೊಳ್ಳಲಿ.

ವಿದ್ಯಾರ್ಥಿ: ನಿನ್ನೆ ರಾತ್ರಿ ನಮ್ಮ ಹಳ್ಳಿಲಿ ಕರೆಂಟ್ ಇರಲಿಲ್ಲ ಸಾರ್ ದಾರಿ ಉದ್ದಕ್ಕೂ ಒಂದೊಂದೇ ಪೇಜ್ ಹರಿದು ಬೆಂಕಿ ಅಂಟಿಸ್ಕೊಂಡು ಆ ಬೆಳಕಲ್ಲೆ ಮನೆ ಸೇರಿದೆ ಸಾರ್!

***

ರಾಜ: ಮಂತ್ರಿಗಳೇ ಅವನನ್ನು ಏಕೆ ಕಟ್ಟಿ ಹೊಡೆಯುತ್ತಿದ್ದಿರಿ?

ಮಂತ್ರಿ: ಮಹಾರಾಜರೇ ಇವನು ನಮ್ಮ ಸೇನಾ ರಹಸ್ಯವನ್ನು ಬಹಿರಂಗ ಪಡಿಸಿದ್ದಾನೆ.

ರಾಜ: ಆದರೆ ನಮ್ಮಲ್ಲಿ ಸೇನೆಯೇ ಇಲ್ಲವಲ್ಲ?

ಮಂತ್ರಿ: ಹೌದು ಪ್ರಭುಗಳೇ ಅದನ್ನೇ ಇವನು ಬಹಿರಂಗ ಪಡಿಸಿದ್ದಾನೆ.

ಸಂಗ್ರಹ: ಶರದ ಕುಲಕರ್ಣಿ, ಬೀದರ

